ಓ ಎಸ್ ನಂಃ 98-15
ಡಿ ಡಬ್ಲ್ಯೂ ಃ 1

ದಿಃ 06-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಜಿ ಆರ್ ವಕೀಲರಿಂದ

26. ಈ ದಾವೆಯನ್ನು ದಶರತ್ ರಾವ್ ಹೂಡಿರುತ್ತಾರೆ. ಈ ದಾವೆಯನ್ನು ಭಾಗ ಬೇಕೆಂದು ಹೂಡಿರುತ್ತಾರೆ. ಈ ದಾವೆಯನ್ನು ದಾವಾ ಸ್ವತ್ತುಗಳ ಸಂಬಂದವಾಗಿ ಹೂಡಿರುತ್ತಾರೆ. ನಾನು ಮತ್ತು ಇತರೆ ಪ್ರತಿವಾದಿಗಳು ಗುಂಡೋಜಿರಾವ್ ರವರ ವಾರಸುದಾರರು ಎಂದರೆ ನಿಜ. ನನ್ನ ತಂದೆ ಮತ್ತು ವಾದಿಯ ತಂದೆ ಇಬ್ಬರು ಜಂಟಿಯಾಗಿ ದಾವಾ ಆಸ್ತಿಗಳು ಹಾಗೂ ಇತರೆ ಆಸ್ತಿಗಳನ್ನು ನಾಲ್ಕು ಕ್ರಯಪತ್ರಗಳ ಮೂಲಕ ಖರೀದಿ ಮಾಡಿದ ಆಸ್ತಿಗಳು ಎಂದರೆ ನಿಜ. ದಾವಾ ಆಸ್ತಿಗಳನ್ನು ಖರೀದಿ ಮಾಡಿದ ನಂತರ ವಾದಿಯ ತಂದೆ ಹಾಗೂ ನನ್ನ ತಂದೆ ಆ ಆಸ್ತಿಗಳಲ್ಲಿ ಭಾಗ ಮಾಡಿಕೊಂಡಿಲ್ಲ. ನನ್ನ ತಂದೆ ಹಾಗೂ ವಾದಿಯ ತಂದೆ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಗಳಲ್ಲಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿ ದಾವಾ ಆಸ್ತಿಗಳನ್ನು ಉಳಿಸಿಕೊಂಡಿರುತ್ತಾರೆ ಎಂದರೆ ನಿಜ.

27. ವಾದಿಯ ಸಹೋದರರು ವಾದಿಗೆ ನಿಪಿ 5 ರಂತೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನಿಜ. ನಿಪಿ 1 ರಿಂದ 4 ನ್ನು ನನ್ನ ತಂದೆ ಹಾಗೂ ವಾದಿಯ ತಂದೆ ಜಂಟಿಯಾಗಿ ಖರೀದಿ ಮಾಡಿದ ಆಸ್ತಿಗಳ ಕ್ರಯಪತ್ರಗಳು ಎಂದರೆ ನಿಜ. ವಾದಿಯ ಸಹೋದರರು ವಾದಿಗೆ ಬರೆದುಕೊಟ್ಟ ಹಕ್ಕು ಖುಲಾಸೆ ಪತ್ರದ ಪ್ರಕಾರ ವಾದಿಯೇ ಅವರ ತಂದೆಯ ಭಾಗಕ್ಕೆ ಬಂದ ಆಸ್ತಿಗಳಿಗೆ ಹಕ್ಕುದಾರರು ಎಂದರೆ ನಿಜ. ನಿಪಿ 7 ರಿಂದ 13 ಪಹಣಿಗಳು ನನ್ನ ತಂದೆ ಹಾಗೂ ವಾದಿಯ ತಂದೆ ಅವರ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿವೆ ಎಂದರೆ ನಿಜ. ಸಾಕ್ಷಿ ಮುಂದುವರೆದು 2004 ರ ನಂತರ ದಾವಾ ಆಸ್ತಿಯ ಪಹಣಿಗಳು ಮತ್ತು ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿನಲ್ಲಿ, ನಂತರ ನನ್ನ ತಾಯಿಯ ಹೆಸರಿನಲ್ಲಿ, ಈಗ ನನ್ನ ಹೆಸರಿನಲ್ಲಿ ಬರುತ್ತಿವೆ ಎಂದು ಹೇಳುತ್ತಾರೆ. ನಿಡಿ 16 ರಿಂದ 18 ಪಹಣಿಗಳು ವಾದಿಯ ತಂದೆ ಹಾಗೂ ನನ್ನ ತಂದೆ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ನಿಜ. ಸಾಕ್ಷಿಗೆ ಈಗ ದಿನಾಂಕಃ 10-02-2004 ಮ್ಯುಟೇಷನ್ ರಿಜಿಸ್ಟರ್ ನ್ನು ತೋರಿಸಲಾಗಿ ಅದು ಲಕ್ಷ್ಮಿಬಾಯಿ ಕೋಂ ಲೇಟ್ ಗುಂಡೋಜಿರಾವ್ ಸಂಬಂಧ ಹೆಂಡತಿ ಎಂಬುದಾಗಿ ಮ್ಯುಟೇಷನ್ ಅಗಿದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ 14 ಎಂದು ಗುರುತಿಸಲಾಯಿತು. ನಿಪಿ 14 ರ ಮೊದಲು ದಾವಾ ಆಸ್ತಿಗಳ ಕಂದಾಯ ದಾಖಲೆಗಳು ನನ್ನ ತಂದೆ ಹಾಗೂ ವಾದಿಯ ತಂದೆ ಇವರ ಹೆಸರಿನಲ್ಲಿ ಜಂಟಿಯಾಗಿ ನಿಪಿ 1 ರಿಂದ 4

ಕ್ರಯಪತ್ರಗಳ ಆಧಾರದ ಮೇಲೆ ಬರುತ್ತಿದ್ದವು ಎಂದರೆ ನಿಜ.

28. ನನ್ನ ತಂದೆ ಹಾಗೂ ವಾದಿಯ ತಂದೆ ಖರೀದಿ ಮಾಡಿದ ಆಸ್ತಿಗಳಲ್ಲಿ ಭಾಗ ಆಗಿದ್ದು ವಾದಿಯ ತಂದೆ ತಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ನಮಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳಲು ಏನಾದರೂ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ, ಕರಾರು ಪತ್ರ ಇದೆ ಎಂದು ಹೇಳುತ್ತಾರೆ. ನನ್ನ ತಂದೆ ಹಾಗೂ ವಾದಿಯ ತಂದೆ ಮದ್ಯೆ ತಾವು ಜಂಟಿಯಾಗಿ ಖರೀದಿ ಮಾಡಿದ ಆಸ್ತಿಗಳಲ್ಲಿ ಭಾಗ ಆಗಿದೆ ಎಂದು ತೋರಿಸಲು ದಾಖಲೆಗಳು ಇಲ್ಲ.

29. ನಾನು ಮತ್ತು ನನ್ನ ತಾಯಿ ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ದಾವಾ ಆಸ್ತಿಗಳ ಕಂದಾಯ ದಾಖಲೆಗಳು ವಾದಿಯ ತಂದೆ ಹಾಗೂ ನನ್ನ ತಂದೆಯ ಜಂಟಿ ಹೆಸರಿನಲ್ಲಿ ಬರುತ್ತಿದ್ದರು ಸಹಾ ನನ್ನ ತಾಯಿಯ ಹೆಸರಿಗೆ ಮಾಡಿಕೊಂಡಿರುತ್ತೇವೆ ಅದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಿಪಿ 14 ರಂತೆ ಕಂದಾಯ ದಾಖಲೆಗಳು ನನ್ನ ತಾಯಿಯ ಹೆಸರಿಗೆ ಫವತಿ ಖಾತೆ ಆಗಿರುತ್ತದೆ ಎಂದರೆ ನಿಜ. ಸಾಕ್ಷಿಗೆ ಈಗ ನಿಡಿ 31 ನ್ನು ತೋರಿಸಲಾಗಿ ಅದರ ಮೊದಲನೇ ಪುಟದಲ್ಲಿ ಸಹಿಗಳು ಇಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಮುಂದಿನ ಪುಟದಲ್ಲಿ ಸಹಿ ಇದೆ ಎಂದು ಹೇಳುತ್ತಾರೆ. ಯಾವುದೇ ದಾಖಲಾತಿ ಆದರೆ ಪಕ್ಷಗಾರರು ಪ್ರತಿ ಪುಟದಲ್ಲಿ ಸಹಿ ಮಾಡುತ್ತಾರೆ ಎಂದರೆ ನಿಜ.

30. ನಿಡಿ 31 ರ ಪ್ರಕಾರ ತಾಲ್ಲೂಕು ಕಛೇರಿಯಲ್ಲಿ ದಾವಾ ಆಸ್ತಿಗಳ ಮ್ಯುಟೇಷನ್ ಆಗಿರುತ್ತದೆ. ನಿಡಿ 31 ರ ಪ್ರಕಾರ ನಾನು ಮ್ಯುಟೇಷನ್ ಆಗಿದೆ ಎಂದು ಹೇಳುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಈಗಾಗಲೇ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಹೇಳುವ ನಿಡಿ 31 ರ ಪ್ರಕಾರ ಯಾವುದೇ ಮ್ಯುಟೇಷನ್ ಗಳು ಆಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 31 ಆಗಿಲ್ಲ, ಅದು ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ನಿಡಿ 31 ನ್ನು ತಯಾರಿಸಲು ಯಾರು ಛಾಪಾ ಕಾಗದ ತೆಗೆದುಕೊಂಡು ಬಂದರು ಗೊತ್ತಿಲ್ಲ. ಎಲ್ಲಿ ಛಾಪಾ ಕಾಗದವನ್ನು ತೆಗೆದುಕೊಂಡು ಬಂದಿರುತ್ತಾರೆ ಗೊತ್ತಿಲ್ಲ. ನಿಡಿ 31 ನ್ನು ಯಾರು ಬರೆದಿರುತ್ತಾರೆ ಗೊತ್ತಿಲ್ಲ. ನಿಡಿ 31 ಕ್ಕೆ ವೆಂಕೋಬರಾವ್ ಅಂದರೆ ನಮ್ಮ ಅಣ್ಣ, ವೆಂಕೋಜಿ ರಾವ್, ಗಂಗೋಜಿ ರಾವ್, ಹನುಮಂತರಾವ್, ಮತ್ತು ವಿ ಎ ರಾಣೋಜಿರಾವ್ ಸಾಟೆ ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ. ನಿಡಿ 31 ರಲ್ಲಿ ಬರವಣಿಗೆ ಇಂಕ್ ಪೆನ್‌ನಲ್ಲಿದ್ದು ಸಹಿಗಳು ಮಾತ್ರ ಬಾಲ್ ಪೆನ್ನಿನಲ್ಲಿ ಇರುತ್ತದೆ ಎಂದರೆ ನಿಜ. ನಿಡಿ 31 ಎಷ್ಟು ರೂಗಳ ಛಾಪಾ ಕಾಗದ ಎಂದರೆ 3 ರೂ ಎಂದು ಹೇಳುತ್ತಾರೆ. ನಿಡಿ 31 ನ್ನು ಖಂಡೋಜಿ ರಾವ್ ರವರ ಮನೆಯಲ್ಲಿ ಬರೆಯಲಾಗಿದೆ. ನಿಡಿ 31 ನ್ನು ಮಾಜಿ ಶಾನಭೋಗರು ಬರೆದಿರುತ್ತಾರೆ. ಅವರ ಹೆಸರು ನನಗೆ ಮರೆತುಹೋಗಿದ್ದು, ಅವರು ಈಗ ತೀರಿಕೊಂಡಿರುತ್ತಾರೆ.

31. ನಿಡಿ 31 ಕ್ರಯಪತ್ರಕ್ಕೆ ಕರಾರು ಪತ್ರವಾಗಿರುತ್ತದೆ. ನಿಡಿ 31 ನ್ನು ಮಾಡುವಾಗ ನನ್ನ ತಂದೆ

ಜೀವಂತವಿದ್ದರು. ನಿಡಿ 31 ರ ಪ್ರಕಾರ ಕ್ರಯಪತ್ರವನ್ನು ಮಾಡಿಕೊಡಬೇಕೆಂದು ನಾನಾಗಲೀ, ನನ್ನ ತಂದೆಯಾಗಲೀ ಅಥವಾ ನನ್ನ ತಂದೆಯ ವಾರಸುದಾರರಾದ ಪ್ರತಿವಾದಿಗಳಾಗಲೀ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಸಾಕ್ಷಿ ಮುಂದುವರೆದು 37 ವರ್ಷಗಳಿಂದ ನಾವೇ ಆ ಪತ್ರದ ಆಸ್ತಿಗಳ ಸ್ವಾಧೀನತೆಯನ್ನು ಹೊಂದಿದ್ದರಿಂದ ನನ್ನ ತಂದೆ ಏನು ಆಗುವುದಿಲ್ಲ ಎಂದು ಹೇಳಿದ್ದರಿಂದ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ನಿಡಿ 31 ಕ್ರಯದ ಕರಾರು ಪತ್ರ ಅಲ್ಲ ಅದು ಸುಳ್ಳು ಇರುತ್ತದೆ ಆ ರೀತಿಯಾದ ಯಾವುದೇ ಕರಾರು ಪತ್ರ ಆಗಿರುವುದಿಲ್ಲ, ಆದ ಕಾರಣ ನಾವು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಡಿ 31 ನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

32. ವಾದಿಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇದ್ದರೂ ಸಹ ಆ ಹಕ್ಕನ್ನು ಕಸಿದುಕೊಳ್ಳಬೇಕು ಎಂಬ ಉದ್ದೇಶದಿಂದ ನಾವು ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ಸುಳ್ಳು ನಿಪಿ 14 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 14 ರ ಪ್ರಕಾರ ನಮಗೆ ವಾದಿಯ ಭಾಗಕ್ಕೆ ಬರುವ ಆಸ್ತಿಗಳ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ನಿಪಿ 14 ರ ಮೇರೆಗೆ ನಿಡಿ 2 ರಿಂದ 5, 10, 11, 12, 19 ರಿಂದ 26 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಹಕ್ಕನ್ನು ಕಿತ್ತುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಮತ್ತು ನನ್ನ ತಾಯಿ ಮತ್ತು ನನ್ನ ಸಹೋದರ ಸಹೋದರಿಯರು ಸೇರಿ 2 ಮತ್ತು 3 ನೇ ದಾವಾ ಆಸ್ತಿಗಳನ್ನು 6 ನೇ ಪ್ರತಿವಾದಿಗೆ ನಿಡಿ 15 ರಂತೆ ಸುಳ್ಳು ಕ್ರಯಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 15 ಕ್ಕೆ ವಾದಿ ಮತ್ತು ಅವರ ಸಹೋದರ, ಸಹೋದರಿಯರು ಪಕ್ಷಗಾರರು ಅಲ್ಲ ಎಂದರೆ ನಿಜ. ನಾನು ಮತ್ತು ನನ್ನ ಸಹೋದರಿಯರು ಸೇರಿ ಸುಳ್ಳು ನಿಡಿ 1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

33. ನಿಡಿ 1 ಕ್ಕೆ ವಾದಿ ಹಾಗೂ ಅವರ ಸಹೋದರ, ಸಹೋದರಿಯರು ಪಕ್ಷಗಾರರು ಅಲ್ಲ ಎಂದರೆ ನಿಜ. ನಿಡಿ 1 ಮತ್ತು 15 ವಾದಿಗೆ ದಾವಾ ಆಸ್ತಿಗಳ ಮೇಲೆ ಇರುವ ಹಕ್ಕಿಗೆ ಬಂಧನಕಾರಿ ಆಗುವುದಿಲ್ಲ ಎಂದರೆ ವಾದಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದು ಹೇಳುತ್ತಾರೆ. ನಾನು, ನನ್ನ ತಾಯಿ ಮತ್ತು ನನ್ನ ಸಹೋದರ ಸಹೋದರಿಯರು ಸೇರಿ ನಿಡಿ 1 ಮತ್ತು 15 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**